ಉತ್ಕಟಾಕಾಂಕ್ಷೆ ಯಾವುದೆಂದು ಕಂಡುಹಿಡಿಯುವುದು ಕಷ್ಟದ ಸಂಗತಿಯೇ ಆದೀತು.

ನನಗೆ ಬಾಲ್ಯದಲ್ಲೊಂದು ಹವ್ಯಾಸವಿತ್ತು. ವಿವಿಧ ಬ್ರಾಂಡಿನ, ಬೇರೆ ಬೇರೆ ಚಿತ್ರದ ಬೆಂಕಿಪೊಟ್ಟಣಗಳನ್ನು ಸಂಗ್ರಹಿಸುವುದು. ಅದೆಷ್ಟು ಹುಚ್ಚಿತ್ತೆಂದರೆ ಅವುಗಳ ಸಂಗ್ರಹಕ್ಕಾಗಿ ನಾನು ಮಾಡಿದ ಸಾಹಸಗಳದ್ದೇ ಒಂದು ಕಥೆಯಾದೀತು. ಸುಮಾರು ಕಾಲೇಜು ತಲುಪುವವರೆಗೂ ಇದ್ದ ಆ ಖಯಾಲಿ ಕಾಲಕ್ರಮೇಣ ನಿಂತು ಹೋಯಿತು. ನಾನು ಆಗಾಗ ಯೋಚಿಸಿದ್ದಿದೆ. ನನ್ನ ಬೆಂಕಿಪೊಟ್ಟಣ ಪ್ರೀತಿಯನ್ನೇ ವೃತ್ತಿಯಾಗಿಸಿಕೊಂಡಿದ್ದರೆ ನಾನೇನಾಗಬೇಕಿತ್ತು. ಬೆಂಕಿಪೊಟ್ಟಣ ತಯಾರಿಕೆಯ ಕೈಗಾರಿಕೆ ತೆರೆಯಬೇಕಿತ್ತೇ? ಅಥವಾ ಹಲವಾರು ಕಂಪನಿಯ ಬೆಂಕಿಪೊಟ್ಟಣಗಳನ್ನು ಮಾರುವ ಟ್ರೇಡರ್ ಆಗಬೇಕಿತ್ತೇ? ಅಥವಾ ಅವುಗಳ ಕವರ್ ಡಿಸೈನ್ ಮಾಡುವ ವಿನ್ಯಾಸಕಾರನಾಗಬೇಕಿತ್ತೆ? ಇಲ್ಲಾ, ದಶಲಕ್ಷ ಅಪರೂಪದ ಬೆಂಕಿಪೊಟ್ಟಣಗಳನ್ನು ಸಂಗ್ರಹಿ ಲಿಮ್ಕಾ ಪುಸ್ತಕದಲ್ಲಿ ದಾಖಲೆ ಬರೆಯಬೇಕಿತ್ತೇ? ಇದರ ಬಗ್ಗೆ ಹೀಗೇ ಒಮ್ಮೆ ಚರ್ಚಿಸುತ್ತಿರುವಾಗ, ನನ್ನ ಗೆಳೆಯರಲ್ಲೊಬ್ಬ, "ಅದನ್ನೇ ನಿನ್ನ ಕೆರಿಯರ್ ಮಾಡಿಕೊಳ್ಳಬೇಕೆಂದಿದ್ದರೆ, ಕಸ ಆಯುವ ಕೆಲಸ ನಿನಗೆ ಬೆಸ್ಟ್ ಸೂಟ್ ಆಗ್ತಿತ್ತು ನೋಡು" ಎಂದು ಕಾಲೆಳೆದಿದ್ದ. ಆ ವಿಷಯ ಹಾಗಿರಲಿ, ಇವತ್ತಿಗೂ ನನಗೆ ಹೊಸ ಬಗೆಯ ಬೆಂಕಿಪೊಟ್ಟಣದ ಕವರ್ ಎಲ್ಲಾದರೂ ರಸ್ತೆಯ ಬದಿಯಲ್ಲಿ ಕಂಡರೆ ಎತ್ತಿಕೊಳ್ಳೋಣ ಅನ್ನಿಸುವುದು ಸುಳ್ಳಲ್ಲ.

ನನಗಿಲ್ಲಿ ಎರಡು ಘಟನೆಗಳು ನೆನಪಾಗುತ್ತಿವೆ. ನನ್ನ ಹಿರಿಯ ಮಿತ್ರರೊಬ್ಬರು ಹೇಳುತ್ತಿದ್ದರು. ಅವರ ಮಗನಿಗೆ ಕಾಲೇಜು ಅಂತಿಮ ವರ್ಷದಲ್ಲಿರುವಾಗ ಅದು ಹೇಗೊ ಸ್ಟೇನ್‌ಲೆಸ್ ಸ್ಟೀಲ್ ತಗಡು ಬಳಸಿ ಕರಕುಶಲ ವಸ್ತುಗಳನ್ನು ಮಾಡುವ ಹುಚ್ಚು ಹತ್ತಿಕೊಂಡಿತಂತೆ. ಅದೇ ತನ್ನ ಆಸಕ್ತಿಯ ವಿಷಯ ಎಂದು ಜ್ಞಾನೋದಯವಾದವನಂತೆ ಘೋಷಿಸಿಯೂ ಬಿಟ್ಟನಂತೆ ಆತ. ಮಗನ ಆಸಕ್ತಿಗೆ ಅಡ್ಡ ಬರಬಾರದೆಂದು ಇವರೂ ಸುಮ್ಮನಿದ್ದರಂತೆ. ಅದಕ್ಕಾಗಿ ಯಾವುದೋ ಕೋರ್ಸು ಸೇರಿ, ಕಾಲೇಜಿನ ಪರೀಕ್ಷೆ ಎರಡೆರಡು ಬಾರಿ ಮುಂದೂಡಿ, ಗುಜರಾತ್, ದೆಹಲಿ ಎಂದೆಲ್ಲಾ ಸುತ್ತಾಡಿದನಂತೆ. ಆತನ ಕೋಣೆ ಹೆಚ್ಚು ಕಮ್ಮಿ ಗುಜರಿ ಅಂಗಡಿಯೇ ಆಗಿತ್ತಂತೆ. ಜೊತೆಗೆ ಅದೇನೇನೋ ಕೊರೆಯುವ, ತುಂಡರಿಸುವ ಯಂತ್ರಗಳು. ಮೈಕೈಗೆ ಆದ ಗಾಯಗಳು ಲೆಕ್ಕಕ್ಕಿಲ್ಲ. ಒಮ್ಮೆಯಂತೂ ಕಿರುಬೆರಳ ತುದಿಯೇ ತುಂಡಾಗಿ ಹೋಗಿತ್ತಂತೆ. ಅನಂತರ ಅದೇ ಕ್ಷೇತ್ರಕ್ಕೇ ಸಂಬಂಧಿಸಿದ ಸಿ.ಎನ್. ಸಿ ಕಂಟಿಂಗ್ ಡಿಸೈನ್ ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರಿದನಂತೆ. ಹಗಲು ರಾತ್ರಿಯೆನ್ನದೇ ಕೆಲಸದಲ್ಲಿ ತೊಡಗಿಸಿಕೊಂಡಿದ್ದನಂತೆ. ಹೀಗೇ ಮೂರ್ನಾಲ್ಕು ವರ್ಷಗಳು ಕಳೆದಿರಬೇಕು. ಧುತ್ತನೊಂದು ದಿನ, "ನಾನು ತಪ್ಪು ಫೀಲ್ಡನ್ನು ಆರಿಸಿಕೊಂಡೆ. ನನಗೆ ಈ ಕೆಲಸ ಒಂಚೂರೂ ಇಷ್ಟವಾಗುತ್ತಿಲ್ಲ" ಅಂದುಬಿಟ್ಟನಂತೆ. "ದೇವ್ರೇ, ನಾಲ್ಕು ವರ್ಷಗಳ ಹಿಂದೆಯೇ ನಿನಗಿದು ಗೊತ್ತಾಗಿದ್ದಿದ್ದರೆ!" ಎಂದು ನಿಟ್ಟುಸಿರು ಬಿಟ್ಟರಂತೆ ನನ್ನ ಹಿರಿಯ ಮಿತ್ರರು.

ಎರಡನೆಯದು – ನಾನು ಟೀವಿಯಲ್ಲಿ ನೋಡಿದ ಪ್ರಸಿದ್ಧ ನಟಿಯೊಬ್ಬಳ ಸಂದರ್ಶನ. ಆಕೆ ಕಾಲೇಜಿನಲ್ಲಿರುವಾಗ ಯಾವುದೋ ಸಿನಿಮಾದ ಶೂಟಿಂಗ್ ನೋಡಲು ಹೋಗಿದ್ದಳಂತೆ. ಗುಂಪಿನಲ್ಲಿದ್ದ ಈಕೆಯನ್ನು ನೋಡಿದ ಆ ಸಿನಿಮಾ ನಿರ್ದೇಶಕ ತನ್ನ ಮುಂದಿನ ಚಿತ್ರದಲ್ಲಿ ಪಾತ್ರವೊಂದನ್ನು ಮಾಡುವ ಆಫರ್ ನೀಡಿದನಂತೆ. ಚಿತ್ರರಂಗದ, ನಟನೆಯ ಲವಲೇಶದ ಹಿನ್ನೆಲೆಯೂ ಇಲ್ಲದ ಆಕೆ ಅಳುಕಿನಿಂದಲೇ ಆ ಪ್ರಸ್ತಾವವನ್ನು ಒಪ್ಪಿಕೊಂಡಳಂತೆ. "ಇಂದು ನಟನೆ ನನ್ನ ಉಸಿರೇ ಆಗಿದೆ. ಸಾಯುವವರೆಗೂ ನಟಿಸಬೇಕೆಂಬುದೊಂದೇ ನನ್ನ ಇಚ್ಛೆ" ಎನ್ನುತ್ತಿದ್ದಳು ಆ ನಟಿ.

ಇಂಥ ಹಲವು ಉದಾಹರಣೆಗಳನ್ನು ಗಮನಿಸಿದಾಗ– ಯಾವುದಾದರೂ ಒಂದು ವಿಷಯದಲ್ಲಿ ಈ ಉತ್ಕಟಾಕಾಂಕ್ಷೆ ಅನ್ನುವುದು ಮನುಷ್ಯನಿಗೆ ಹುಟ್ಟಿನಿಂದಲೇ ಇರುತ್ತದೆ, ಅದು ಸುಪ್ತವಾಗಿರುವುದರಿಂದ ಕಾಲಾಂತರದಲ್ಲಿ ಆತ ಅದನ್ನು ಕಂಡುಕೊಳ್ಳಬೇಕು ಎನ್ನುವ ನಂಬಿಕೆ